ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಹೌದು

ಆ) ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ರೂ.66.00 ಲಕ್ಷಗಳಿಗೆ ದಿನಾಂಕ: 4-12-1997 ರಂದು ಹಾಗೂ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಕಛೇರಿಯಿಂದ ದಿನಾಂಕ : 31-12-1997 ರಲ್ಲಿ ರೂ.66.00 ಲಕ್ಷಗಳಿಗೆ ನೀಡಲಾಗಿದೆ.

ಇ) ಕೇಂದ್ರ ಸರ್ಕಾರ ಅನುಮೋದಿಸಿದ್ದ ರೂ.175 ಲಕ್ಷಗಳಲ್ಲಿ ರೂ.100 ಲಕ್ಷಗಳು ಕೇಂದ್ರ ರಸ್ತೆ ನಿಧಿ ಯೋಜನೆ ಅನುದಾನದಿಂದಲೂ ಹಾಗೂ ರೂ.75.00 ಲಕ್ಷಗಳನ್ನು ರಾಜ್ಯ ಸರ್ಕಾರದಿಂದಲೂ ಭರಿಸಲು ಸೂಚಿಸಲಾಗಿತ್ತು. ಲಭ್ಯವಿದ್ದ ಸಿಆರ್‌ಎಫ್ ಅನುದಾನಕ್ಕನುಗುಣವಾಗಿ ಸದರಿ ಕಾಮಗಾರಿಯನ್ನು ರೂ.66.00 ಲಕ್ಷಗಳಿಗೆ ರಾಜ್ಯ ಸರ್ಕಾರವು ಮಿತಿಗೊಳಿಸಿ ಆಡಳಿತಾತ್ಮಕ ಅನುಮೋದನೆ ನೀಡಿದ ಕಾರಣ ಕೇಂದ್ರ ಸರ್ಕಾರದ ಪಾಲಿನಲ್ಲಿ ರೂ. 34 ಲಕ್ಷಗಳನ್ನು ಈ ಕಾಮಗಾರಿಯಿಂದ ಹಿಂದಕ್ಕೆ ಪಡೆದು ರಾಜ್ಯದ ಒಟ್ಟು ಸಿಆರ್‌ಎಫ್ ನಿಧಿಗೆ ಸೇರಿಸಲಾಗಿದೆಯೆಂದು ಕೇಂದ್ರ ಸರ್ಕಾರದಿಂದ ಸೂಚಿಸಲಾಗಿದೆ. ಸದರಿ 66 ಲಕ್ಷಗಳ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಆದ್ದರಿಂದ ರೂ. 109 ಲಕ್ಷಗಳಿಗೆ ಉಳಿಕೆ ಕೆಲಸ ಕೈಗೊಳ್ಳು ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಸಿಆರ್‌ಎಫ್ ಫಂಡ್‌ನಲ್ಲಿ ಈಗ ಮಂಜೂರಾದ ಕೆಲಸವನ್ನು ತೆಗೆದುಕೊಳ್ಳಲು ಹಣಕಾಸಿನ ತೊಂದರೆ ಇರುವುದಿಲ್ಲ.

ವಾಸ್ತುಶಿಲ್ಪ ವಿಭಾಗದ ಅವಶ್ಯಕತೆ ಬಗ್ಗೆ.

2235(3399) ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಲೋಕೋಪಯೋಗಿ ಇಲಾಖೆಗೆ ಹೊಂದಿಕೊಂಡಿರುವ ವಾಸ್ತುಶಿಲ್ಪಿ ವಿಭಾಗವು ಕಾರ್ಯ ನಿರತವಾಗಿದ್ದರೂ ಕೂಡ ಇಲಾಖೆಗೆ ಸಂಬಂಧಪಟ್ಟ ಕಾಮಗಾರಿ ಕುರಿತು ಅಂದಾಜು ವೆಚ್ಚ ಮತ್ತು ನೀಲಿನಕ್ಷೆಯನ್ನು ಖಾಸಗಿಯವರಿಂದ ತಯಾರಿಸುತ್ತಿರಲು ಕಾರಣವೇನು?

ಆ) ಹಾಗಿದಲ್ಲಿ ವಾಸ್ತುಶಿಲ್ಪಿ ವಿಭಾಗದ ಅವಶ್ಯಕತೆ ಇದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಸರ್ಕಾರದ ಎಲ್ಲಾ ಕಟ್ಟಡ ಕಾಮಗಾರಿಗಳಿಗೆ ವಾಸ್ತುಶಿಲ್ಪ ನಕ್ಷೆಗಳನ್ನು ವಾಸ್ತುಶಿಲ್ಪಿ ಇಲಾಖೆಯಲ್ಲಿ ತಯಾರಿಸಲಾಗುತ್ತಿದೆ. ಈ ಇಲಾಖೆಯಿಂದ ಯಾವುದೇ ಕಟ್ಟಡ ಕಾಮಗಾರಿಗಳ ನಕ್ಷೆ ತಯಾರಿಕೆಯನ್ನು ಖಾಸಗಿಯವರಿಗೆ ನೀಡಲಾಗಿಲ್ಲ. ವಿನ್ಯಾಸಗೊಳಿಸಿದ ಕಟ್ಟಡಗಳ

ವಿವರವಾದ ಅಂದಾಜು ವೆಚ್ಚವನ್ನು ವಾಸ್ತುಶಿಲ್ಪಿ ಇಲಾಖೆ ತಯಾರಿಸುತ್ತಿಲ್ಲ. ಕಟ್ಟಡಗಳ ಅಂದಾಜು ವೆಚ್ಚವನ್ನು ಲೋಕೋಪಯೋಗಿ ಇಲಾಖೆಯ ಸಂಬಂಧಿಸಿದ ವಿಬಾಗದಳಲ್ಲಿಯೇ ತಯಾರಿಸಲಾಗುತ್ತಿದೆ.

ಅ) ಸರ್ಕಾರದ ಎಲ್ಲಾ ಕಟ್ಟಡಗಳ ಕಾಮಗಾರಿಗಳ ನಕ್ಷೆಗಳನ್ನು ವಾಸ್ತುಶಿಲ್ಪಿ ಇಲಾಖೆ ತಯಾರಿಸುತ್ತಿದ್ದು ಪ್ರತಿ ವರ್ಷ ಅಂದಾಜು ವೆಚ್ಚ 100 ರಿಂದ 150 ಕೋಟಿ ರೂ.ಗಳ ನಕ್ಷೆಗಳನ್ನು ತಯಾರಿಸಿ ನೀಡಲಾಗುತ್ತಿದೆ. ಈ ನಕ್ಷೆಗಳ ತಯಾರಿಕೆಯನ್ನು ಖಾಸಗಿಯವರಿಗೆ ನೀಡಿದಲ್ಲಿ 100 ಕೋಟಿಗೆ ಶೇ.2ರಂತೆ 2 ಕೋಟಿ ರೂ.ಗಳ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ವಾಸ್ತುಶಿಲ್ಪಿ ಇಲಾಖೆ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರತಿ ವರ್ಷ ಸರ್ಕಾರವು ವೆಚ್ಚ ಮಾಡುತ್ತಿರುವ ಅಂದಾಜು ವೆಚ್ಚ 60 ರಿಂದ 70 ಲಕ್ಷ ರೂ.ಗಳವರೆಗೆ ಇರುವುದರಿಂದ ಈ ಇಲಾಖೆಯಿಂದ ಸರ್ಕಾರಕ್ಕೆ ಉಳಿತಾಯವೇ ಆಗುತ್ತಿದೆ.

ದೊಡ್ಡಬಳ್ಳಾಪುರ ನಗರ ಪಶುವೈದ್ಯ ಆಸ್ಪತ್ರೆಯ ಕಟ್ಟಡದ ದುರಸ್ತಿ.

2236 (3231) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದೊಡ್ಡಬಳ್ಳಾಪುರ ನಗರದ ಸರ್ಕಾರಿ ಪಶುವೈದ್ಯ ಆಸ್ಪತ್ರೆಯ ಕಟ್ಟಡ ಸುಮಾರು 70-80 ವರ್ಷಗಳಷ್ಟು ಹಳೆಯದಾಗಿದ್ದು ಕಟ್ಟಡ ಶಿಥಿಲವಾಗಿ ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಎಂದಿನಿಂದ ದುರಸ್ತಿ ಕೆಲಸ ಪ್ರಾರಂಭಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಬಂದಿದೆ.

ಆ) ತಾಲ್ಲೂಕು ಪಂಚಾಯತ್ ಹಂತದಲ್ಲಿ ಎಸ್ಟಿಮೇಟನ್ನು ತಯಾರಿಸಿರುವರು.

ಇ) ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗವು ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ತುರುವೇಕೆರೆಯಲ್ಲಿ ದಿವಂಗತ ಟಿ. ಸುಬ್ರಹ್ಮಣ್ಯರವರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ.

2239 (2696) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣಯ್ಯ) (ತುರುವೇಕೆರೆ) :— ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.